ಸಾಗುತ್ತಿತ್ತು. ಜನರ ಕಾಲು, ಬೆರಳುಗಳನ್ನು ತುಳಿಯುತ್ತ ಅವರಿಂದ ಶಪಿಸಲ್ಪಡುತ್ತ ನಾನು ಅನುಸರಿಸುತ್ತಿದ್ದುದು ಆತನ ಬಿಳಿ ಕುರ್ತಾವನ್ನು. ರೈಲು ಒಮ್ಮೆ ಗಟ್ಟಿಯಾಗಿ ಕುಲುಕಿ, ಚಲಿಸಲು ಆರಂಭಿಸುವಷ್ಟರಲ್ಲಿ ನಾವು ಬೋಗಿಯನ್ನೇರಿದೆವು. ಉಸಿರು, ಪ್ರಜ್ಞೆ ಎರಡನ್ನೂ ಮೊದಲಿನ ಸ್ಥಿತಿಗೆ ತಂದುಕೊಳ್ಳುತ್ತ ನಾನು ಆತನ ಪಕ್ಕದಲ್ಲಿ ಕುಳಿತೆ.

'ಏನು ನಡೆಯುತ್ತಿದೆ? ನನ್ನ ಟಿಕೆಟ್ ಎಲ್ಲಿ?' ಕೇಳಿದೆ.

ತನ್ನ ಭುಜದಿಂದ ಬಟ್ಟೆಯ ಚೀಲವನ್ನು ಕೆಳಗಿಳಿಸಿ ಕೊಕ್ಕೆಗೆ ನೇತು ಹಾಕಿದ ಮಹಾಶಯ ಇತರರೆಡೆಗೆ ನೋಡಿ ನಕ್ಕ, ಅವರು ಹೋಗುತ್ತಿರುವುದು ಎಲ್ಲಿಗೆಂದು ವಿಚಾರಿಸಿದ. ಅನಂತರ ನನ್ನೆಡೆಗೆ ತಿರುಗಿದ.

'ಅಯ್ಯಯ್ಯ! ಇತ್ತೀಚೆಗೆ ಈ ಯುವಜನತೆಗೇಕೆ ಬರೀ ಅಸಹನೆ? ನಾವು ಸ್ವಾತಂತ್ರ್ಯಕ್ಕಾಗಿ ಹಪಹಪಿಸುತ್ತಿದ್ದರೂ ನಮಗೇ ನಾವು ಹೇಳಿಕೊಳ್ಳುತ್ತಿದ್ದೆವು, 'ತಾಳ್ಮೆಗೆ ಸದಾ ಜಯವಾಗುತ್ತದೆ.' ನಿಜ, ನಾನೊಬ್ಬ ಸ್ವಾತಂತ್ರ್ಯ ಹೋರಾಟಗಾರ,' ಸುಕ್ಕುಸುಕ್ಕಾದ ಆತನ ಮುಖ ಹೊಳೆಯುತ್ತಿತ್ತು. 'ಭಾರತಮಾತೆಯ ಮಗ. ಹಾಗಾಗಿ ನಾನು ಮತ್ತು ನನ್ನ ಸಹಾಯಕ ಎಲ್ಲಿಂದ ಎಲ್ಲಿಗೆ ಬೇಕಾದರೂ ಪುಕ್ಕಟೆಯಾಗಿ ರೈಲಿನಲ್ಲಿ ಸಂಚರಿಸಬಹುದು. ಭಾರತದೊಳಗೆ, ಖಂಡಿತವಾಗಿಯೂ.' ಆತನ ನಗುವಿನಲ್ಲಿ ತುಂಟತನವಿತ್ತು. 'ನಾನು ಬ್ಯಾಂಕ್ ಅಧಿಕಾರಿಯೊಡನೆ ಬರುತ್ತೇನೆ. ನಿನ್ನೊಂದಿಗೆ ಹೋಗುತ್ತೇನೆ.'

'ನಿಮಗೆ ದೊರಕಿರುವ ಸವಲತ್ತನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದೀರಿ. ನೀವೊಬ್ಬ ಮೋಸಗಾರ!' ಬುಸುಗುಟ್ಟಿದೆ.

'ನನಗೆ ಎಂಬತ್ತಾನಾಲ್ಕು ವರ್ಷ ವಯಸ್ಸು. ಮನೆಯಲ್ಲಿ ಹಲವಾರು ಹಸಿದ ಹೊಟ್ಟೆಗಳು ಕಾಯುತ್ತಿವೆ. ನನಗೆ ಹಣದ ಅವಶ್ಯಕತೆ ಇದೆ. ನಿನಗೆ ದಿಲ್ಲಿಗೆ ಬರಬೇಕಿದೆ. ಅಷ್ಟೆ.'

ಹಾಗೆ ಹೇಳಿದವನೇ ಮೆತ್ತನೆಯ ಸೀಟಿನ ಮೇಲೆ ಚಕ್ಕಳಮಕ್ಕಳ ಹಾಕಿ ಕೂತು ನಾನು ಅಲ್ಲಿ ಇಲ್ಲವೇ ಇಲ್ಲವೇನೋ ಎಂಬಂತೆ ಸಹಪ್ರಯಾಣಿಕರೊಂದಿಗೆ ಮಾತಿಗಿಳಿದ.

'ನಾವು ಸ್ವಾತಂತ್ರ್ಯ ಪಡೆಯುವುದಾದರೂ ಏಕೆ, ಹೇಳು, ಹೇಳು?' ಅವನ ಪ್ರಶ್ನೆ.

'ಜನರು ರಾಮ... ರಹೀಮ... ಅಂತ ಹೊಡೆದಾಡಿಕೊಳ್ಳಲೆಂದೇ? ಪರಸ್ಪರರನ್ನು ಕೊಲ್ಲಲೆಂದೇ? ಕ್ರಿಸ್ತನ ಹೆಸರಿನಲ್ಲಿ ಸುಡಲೆಂದೇ?'

'ನೀವು ಎಂದಿಗೂ ಪಶುಗಳಾಗುವುದಿಲ್ಲ. ಒಳ್ಳೆಯ ನಾಗರಿಕರೇ ಆಗುವುದು,' ನಾನು ನನ್ನ ಮಕ್ಕಳಿಗೆ ಪ್ರತಿನಿತ್ಯ ಹೇಳುತ್ತೇನೆ. ಅವರಾದರೋ ಎಷ್ಟು ಜನ ಅಂತೀರಿ? ಒಬ್ಬಿಬ್ಬರಲ್ಲ. ಈ ವಿಷಯದಲ್ಲಿ ನಾನು ಶ್ರೀಮಂತನೇ,' ಆತ ನಕ್ಕ.

ಒಳ್ಳೆಯ ನಾಗರಿಕರು... ಹ್ಞಂ! ವಂಚಕನ ಕಿಸೆಯಲ್ಲಿರುವುದು ನನ್ನ ದುಡ್ಡು. ಈತ ನಿಜಕ್ಕೂ ಸ್ವಾತಂತ್ರ್ಯ ಹೋರಾಟಗಾರನಾಗಿದ್ದನೇ? ಅವರಿಗೆ ಇಂತಹ ಸವಲತ್ತುಗಳು ಸಿಗುವುದು ನಿಜವೇ? ಆತ ಒಂದು ವೇಳೆ ಸುಳ್ಳು ಹೇಳಿದ್ದು, ನನಗೆ ಟಿಕೆಟ್ ತೋರಿಸಲು ಕೇಳಿದರೆ? ನನಗೆ ದಂಡ ವಿಧಿಸುತ್ತಾರಲ್ಲವೇ ಅಥವಾ ಜೈಲಿಗೆ ತಳ್ಳಿದರೆ? ಅಯ್ಯೋ ದೇವರೆ!

ಆದರೆ, ಟಿಕೆಟ್ ಪರೀಕ್ಷಕ ಬಂದವನು ಆತನಿಗೆ ಮತ್ತು ನನಗೆ ಹಳೆಯ ಸ್ನೇಹಿತರೇನೋ ಎಂಬಂತೆ ಶುಭಕೋರಿ ಹೊರಟುಹೋದ. ನನಗೆ ಸ್ವಲ್ಪ ಮಟ್ಟಿಗೆ ನಿರಾಳವೆನಿಸಿತು. ಆದರೆ ಆತ ತನ್ನ ಮಕ್ಕಳ ಬಗ್ಗೆ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದ ರೀತಿ ಅಸಹನೀಯವಾಗಿತ್ತು.

ಇಷ್ಟೊಂದು ಮಕ್ಕಳಿಗೆ ಆತ ತಂದೆಯಾಗಿದ್ದಾದರೂ ಏಕೆ? ಕೇಳಿದ್ದರೆ ಎಲ್ಲರ ಗಮನ ನನ್ನತ್ತಲೇ